ಪ್ರಬಂಧ



ಪ್ರಜ್ಞಾ ಮತ್ತೀಹಳ್ಳಿ
ಕಲೆ: ರಾಮಕೃಷ್ಣ ಸಿದ್ರಪಾಲ

# ಎನ್ ಪತಿಯ ಎಂಪತಿ



‘ಹಲೋ ಎಲ್ಲಿ ಇದ್ದೀರಿ. ಆಗಲೇ ರಾತ್ರಿ ಹತ್ತು ಹೊಡೀತಲ್ರಿ’ ಅಂತ ಗಾಬರಿಯಿಂದ ಫೋನು ಮಾಡಿದೆ. ರಾತ್ರಿ ಹತ್ತಕ್ಕೆ ಇನ್ಯಾರಿಗೆ ಫೋನು ಮಾಡಲು ಸಾಧ್ಯ ಹೇಳಿ? ಸಪ್ತಪದಿ ತುಳಿದು ಆನಂತರ ಕಾಯಾ ವಾಚಾ ಮನಸಾ ಚರಾಚರಗಳಲ್ಲಿನ ಕಷ್ಟ-ಸುಖಗಳನ್ನು ಸರಾಸರಿ ಹಂಚಿಕೊಂಡು ಪರಸ್ಪರರ ಬಗ್ಗೆ ತರಹೇವಾರಿ ತಕರಾರುಗಳ ಪಟ್ಟಿ ಮಾಡಿ ಶರಂಪರ ಕಿತ್ತಾಡುವ ಮತ್ತೆ ಮರುಕ್ಷಣ ಎಲ್ಲಿದ್ದಿ ಎಂದು ಕೂಗಿ ಹುಡುಕುವ ಏಕೈಕ ಸಂಬಂಧಿಗೆ ಹೀಗೆ ಫೋನು ಮಡುವುದು. ‘ಬಂದೆ ತಡಿ, ನಾನಿಲ್ಲಿ ಗೆಳೆಯ ಶೇಕ್ಯಾನ ಮನೇಲದಿನಿ, ಅವರಪ್ಪಗ ತಲಿ ತಿರಗಲಿಕ್ಕೆ ಹತ್ತಿತ್ತು. ಅದಕ್ಕ ಛಬ್ಬಿ ಕಡೆ ಕರಕೊಂಡು ಹೋಗಿ ಬಂದ್ವಿ ಈಗ ಸ್ವಲ್ಪ ಆರಾಮ ಆಗ್ಯಾರ’. ಅಲ್ಲಾ ನೀವು ಶೇಕ್ಯಾನ